ವಿನೋದ ಹುಟ್ಟಿದಾಗಿನಿಂದ ವೆಂಕುಮಾವನ ಮನೆ, ಸಂಸಾರ ಎಲ್ಲವೂ ಹದಕ್ಕೆ ಬಂದಿದ್ದಂತೆ. ಮುದ್ದಿನ ಮಗ ವಿನೋದನಿಗೆ ನಾನು ಬಹಳ ಹಿಡಿಸಿದ್ದೇನೆನ್ನುವ ಕಾರಣಕ್ಕೆ ವೆಂಕುಮಾವ ನನ್ನನ್ನು ಸೊಸೆಯನ್ನಾಗಿ ಮಾಡಿಕೊಳ್ಳಲು ಬಹಳ ದುಂಬಾಲು ಬಿದ್ದಿದ್ದ. ರುಬಾಬು ತೋರಿಸುವ ಗುಣವಿಲ್ಲದ ವಿನೋದನೂ ಕೂಡ ಖುದ್ದು ನನ್ನ ಬಳಿ ನಾಲ್ಕಾರು ಬಾರಿ ನಿವೇದಿಸಿಕೊಂಡಿದ್ದ, ಅಕ್ಷರಶಃ ಗೋಗರೆದಿದ್ದ. ಆಯಿಯಿಂದ ಹಿಡಿದು ಮನೆಯವರೆಲ್ಲರೂ ವಿನೋದನ ಪ್ರಸ್ತಾಪವನ್ನು ಒಪ್ಪಲು ನನ್ನ ಮೇಲೆ ಬೇಕಷ್ಟು ಒತ್ತಡವನ್ನೂ ಹಾಕಿದ್ದರು. ನಾನು ಯಾರಿಗೂ ಸೊಪ್ಪೇ ಹಾಕಿರಲಿಲ್ಲ. ಅದೃಷ್ಟ ಒಮ್ಮೆ ಮಾತ್ರ ಬಾಗಿಲು ತಟ್ಟುತ್ತದೆ ಎನ್ನುತ್ತಾರಲ್ಲ ಅದು ನನ್ನ ಪಾಲಿಗೆ ಸುಳ್ಳು, ಬಾರಿ ಬಾರಿ ಬಾಗಿಲು ತಟ್ಟುತ್ತದೆ! ಕದ ತೆರೆಯಲು ಮನಸ್ಸೇ ಮಾಡದಿದ್ದರೆ ನಮ್ಮ ಹಣೆಯಬರಹದಲ್ಲಿದ್ದ ಅದೃಷ್ಟ ಬೇರೆಯವರ ಪಾಲಾಗುತ್ತದೆ ಎಂದು ಆಳವಾಗಿ ಎನ್ನಿಸಿದ್ದು ವಿನೋದನ ಮದುವೆಯ ದಿನ. ನಾನು ಕಳೆದುಕೊಂಡಿದ್ದೇನು ಅಂತ ಮೊದಲ ಬಾರಿಗೆ ನನ್ನ ಗ್ರಹಿಕೆಗೆ ಬಂದಿದ್ದೇ ಆಗ.

ವಿನೋದನ ಮದುವೆಗೆ ಹೋಗಿಬಂದ ಆಯಿಯನ್ನು ಕೇಳಿದ್ದೆ, 'ಮದುವೆ ಚೆನ್ನಾಗಿ ಆಯಿತಾ, ಹುಡುಗಿ ಹೇಗಿದ್ದಾಳೆ' ಅಂತ. ಆಯಿ ನಯಾಪೈಸೆ ಮಾತಾಡಿರಲಿಲ್ಲ. ನಾನು ಬೇಕಂತಲೇ ಅಕಸ್ಮಾತಾಗಿ ಕೇಳುವ ಪ್ರಶ್ನೆಯೆಂಬಂತೆ ಆಗಾಗ 'ಅಲ್ರೆ ಆಯಿ ಮದುವೆ ಹೇಗಾಯ್ತು ಅಂತ ಹೇಳಲೇ ಇಲ್ಲ, ಯಾರ್ಯಾರು ಬಂದಿದ್ದರು...' ಅದೂ ಇದೂ ಅಂತ ಸಾವಿರ ಪ್ರಶ್ನೆಯನ್ನು ಕುಟುಕಿ ಕೇಳಿದ್ದೆ. ಆಯಿಯದ್ದು ಮಾತ್ರ ಎಂಥವರ ಸಹನೆಯನ್ನೂ ಕೆರಳಿಸಿಬಿಡುವ ಮೌನ! ನಾನು ಆಯಿಯಿಂದ ಬೇರೆಯದೇ ಆದ ಪ್ರತಿಕ್ರಿಯೆಯನ್ನು ನಿರೀಕ್ಷಿಸಿದ್ದೆ.

'ವಿನೋದನ ನಗು ಕೃತಕವಾಗಿತ್ತು. ವಿನೋದ ಸಪ್ಪೆಯಾಗಿದ್ದ. ಮದುವೆ ಹುಡುಗಿ ಲೋಕಾನೀತಿಯಿದ್ದಾಳೆ' ಅಥವಾ 'ಹುಡುಗಿ ನಿನ್ನಷ್ಟು ಚೆಂದವಿಲ್ಲ' ಎಂದೆಲ್ಲಾ ಹೇಳಲಿ ಎಂಬ ಬಯಕೆ ನನಗೆ.

ಆಯಿ ಹಾಗೇನೂ ಹೇಳದೆ ಒಂದೇ ಮಾತಿನಲ್ಲಿ, 'ಹೊಂದಿಕೊಂಡು, ಮನೆ ತೂಗಿಸಿಕೊಂಡು ಹೋಗುವಂತಿದ್ದಾಳೆ' ಎಂದು ಗಪ್ಪಾಗಿಬಿಟ್ಟಿದ್ದಳು.

ವಿನೋದನ ಮದುವೆಯ ನಂತರ ನಾನು ಕುಗ್ಗಿದ್ದಂತೂ ಹೌದು. ನಿಧಾನವಾಗಿ ಹುಬ್ಬಳ್ಳಿಯ ಬದುಕು, ನನ್ನ ಕೆಲಸ, ಖಾನಾವಳಿಯ ಊಟ, ಮಾತು ಮಾತಿಗೆ ತಕರಾರು ತೆಗೆಯುವ ಮನೆಯ ಓನರ್ ಅಂತ ಮುಳುಗಿದರೂ ಆಗಾಗ ಮನೆಗೆ ಬಂದಾಗೆಲ್ಲ ಹರ್ಷ ವಿನೋದನ ಸುದ್ದಿ ತೆಗೆದು ಗಾಯದ ಮೇಲೆ ಕೂಡ್ರುವ ನೊಣದಂತೆ ಹಲವರೆಯುತ್ತಿದ್ದ. ಅತ್ತ ವಿನೋದನಿಗೆ ಒಳ್ಳೆಯದಾದಷ್ಟೂ ಇತ್ತ ನಾನು ನಮ್ಮನೆಯವರ ದೃಷ್ಟಿಯಲ್ಲಿ ಇನ್ನೂ ಇನ್ನೂ ಅಪರಾಧಿಯಾಗುತ್ತಿದ್ದೆ. ಆಯಿ ಬಡಿಸಿದ ಲಾಡುವನ್ನು ನಾನು ಮುಟ್ಟಲೂ ಇಲ್ಲ. ಲಾಡುವನ್ನು ಬಾಳೆಯ ತುದಿಗೊತ್ತಿ ಉಂಡು ಎದ್ದುಬಿಟ್ಟೆ. ಆಯಿ ತನ್ನ ಪಾಲಿನ ಲಾಡುವನ್ನು ಹರ್ಷನಿಗೇ ಬಡಿಸಿ ಕೈತೊಳೆದುಕೊಂಡಳು. ಹರ್ಷ, 'ಇನ್ನೆಷ್ಟು ವರ್ಷ ಈ ಮೊಣ್ಣನ ಕುಟುಂಬದ ಹೊಟ್ಟೆ ಹೊರೆಯಬೇಕೋ' ಎಂದು ಗೊಣಗಿದರೆ ಚಿಕ್ಕಯ್ಯ, ಚಿಕ್ಕಮ್ಮ, ಚಿಕ್ಕಯ್ಯನ ಎರಡು ಮಕ್ಕಳು ಲೆಕ್ಕ ಹಾಕುತ್ತಿರುವವರಂತೆ ಗೋಣಾಡಿಸಿ ಹರ್ಷನಿಗೆ ಸಾಥ್ ನೀಡಿದರು.

ನಿಜ ಹೇಳಬೇಕೆಂದರೆ ಮನೆಗೆ ಬರುವ ಹುಮ್ಮಸ್ಸು ಮೊದಲಿರುವಂತೆ ನನ್ನಲ್ಲಿ ಈಗಂತೂ ಇಲ್ಲವೇ ಇಲ್ಲ. ಅಪ್ಪ ಆಯಿಗೋಸ್ಕರ ಬರುತ್ತೇನೆ, ಎರಡು ದಿನ ಉಳಿಯುತ್ತೇನೆ... ಈ ಮನೆಯಲ್ಲಿರುವವರೆಲ್ಲಾ ನನ್ನನ್ನು ಭಾವನೆಯಿಲ್ಲದ ಯಂತ್ರವೆಂದು ಭಾವಿಸಿದ್ದರಿಂದಲೋ ಏನೋ ನಾನೂ ಈ ಮನೆಯಲ್ಲಿರುವಷ್ಟೂ ಹೊತ್ತು ಯಾಂತ್ರಿಕವಾಗಿಯೇ ಬದುಕಲು ಪ್ರಯತ್ನಿಸುತ್ತೇನೆ.

ಊಟ ಮುಗಿಸಿದ ಆಯಿ ಧುಮುಗುಡುತ್ತಲೇ ನನ್ನ ಕೋಣೆಯೊಳಗೆ ಬಂದು, 'ನಿನ್ನಪ್ಪ